**ಅಸಲು ದಾವ ಸಂಖ್ಯೆಃ 666/2013**
**ಪಿ .ಡಬ್ಲೂ -1**

ದಿಃ 11.12.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
**ಮುಂದುವರೆದ ಪಾಟೀ ಸವಾಲು 1 ರಿಂದ 3 ನೇ ಪ್ರತಿವಾದಿ ಪರವಕೀಲರಾದ ಶ್ರೀ ಎ ಸಿ ಹೆಚ್ ರವರಿಂದಃ-**

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಮರಾಠಿ ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀ ಪಿ ಕೆ ಹೆಚ್ ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು ವಾದಿಯ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು, ಸಾಕ್ಷಿಯು ಮರಾಠಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ. ರೂ.200/- ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.)

1. ನಾನು ಈ ಹಿಂದೆ ದಾವಾ ಸ್ವತ್ತಿನ ವಿಸ್ತೀರ್ಣವನ್ನು 25X150 ಅಡಿ ಎಂದು ಹೇಳಿದ್ದು ಅದು ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ವಾದ ಪತ್ರದಲ್ಲಿ ದಾವಾ ಸ್ವತ್ತಿನ ವಿಸ್ತೀರ್ಣವನ್ನು 25 X 30 ಅಡಿ ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವೆಯನ್ನು ಹೂಡಲು ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನಾನು ದಾವೆಯನ್ನು ತಯಾರಿಸಲು ವಕೀಲರಿಗೆ ಖರೀದಿ ಪತ್ರ ಮತ್ತು ಉತಾರೆಯನ್ನು ನೀಡಿರುತ್ತೇನೆ. ನಾನು ಸದರಿ ಖರೀದಿ ಪತ್ರವನ್ನು ಮತ್ತು ಉತಾರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಖರೀದಿ ಪತ್ರ ಇರುವುದಿಲ್ಲ. ಖರೀದಿ ಪತ್ರವು ಯಾವ ಸಾಲಿನದ್ದು ಎಂದು ನನಗೆ ಗೊತ್ತಿಲ್ಲ ಹಾಗೂ ನಾನು

ಓದಿ ತಿಳಿದುಕೊಂಡಿರುವುದಿಲ್ಲ. ನಾನು ಮೂಲ ಖರೀದಿ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತಿನ ಸಂಬಂಧ ನನ್ನ ಬಳಿ ಅಥವಾ ನನ್ನ ವಕೀಲರ ಬಳಿ ಯಾವುದೇ ಖರೀದಿ ಪತ್ರ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ತಾನು ವಕೀಲರ ಬಳಿ ಕೊಟ್ಟಿರುವುದಾಗಿ ನುಡಿಯುತ್ತಾರೆ.

2. ನಾನು ಈ ಹಿಂದೆ ಹೇಳಿದ ದಾವಾ ಸ್ವತ್ತಿನ ಚೆಕಬಂಧಿ ಸರಿ ಇರುತ್ತದೆ. ದಾವಾ ಸ್ವತ್ತಿನ ಉತ್ತರಕ್ಕೆ ನನಗೆ ಸೇರಿದ ಮನೆ ನಂಬರ 147 ಎಂದರೆ ಸರಿ, ದಕ್ಷಿಣಕ್ಕೆ ನಾಲೆ ಮತ್ತು ಸಾರ್ವಜನಿಕ ರಸ್ತೆ ಎಂದರೆ ಸಾಕ್ಷಿಯು ನಾಲೆ ಮತ್ತು ವೆಂಗೂರ್ಲಾ ರಸ್ತೆ ಇದೆ ಎಂದು ನುಡಿಯುತ್ತಾರೆ. ಪೂರ್ವಕ್ಕೆ ಸದು ಸಟ್ಟು ಜಾದವ ರವರ ಮನೆ ಎಂದರೆ ಸರಿ, ಪಶ್ಚಿಮಕ್ಕೆ ಸಟ್ಟು ಸುಬ್ಬರಾವ ಜಾದವ ರವರ ಮನೆ ಇರುತ್ತದೆ. ವಾದ ಪತ್ರದಲ್ಲಿ ಪಶ್ಚಿಮಕ್ಕೆ ಜ್ಯೋತಿಬಾ ಸೆಟ್ಟು ಜಾದವ ರವರ ಮನೆ ಇದೆ ಎಂದು ಉಲ್ಲೇಖಿಸಿರುವುದು ಸರಿ ಇರುವುದಿಲ್ಲ.

3. ಈ ದಾವೆಯಲ್ಲಿ ನನ್ನ ಸಹೋದರಿಯರನ್ನು ನಾನು ಪಕ್ಷಗಾರರನ್ನಾಗಿ ಮಾಡಿಲ್ಲ. ನನ್ನ ಸಹೋದರಿಯರ ಹೆಸರು ಸುಗಂಧಾ, ಆನಂದಿ ಹಾಗೂ ಹೊನ್ನವ್ವಾ. ಸದರಿಯವರ ಪೈಕಿ ಸುಗಂಧಾ ರವರು 7-8 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಸುಗಂಧಾ ರವರಿಗೆ ಇಬ್ಬರೂ ಗಂಡು ಮಕ್ಕಳು ಮತ್ತು ಇಬ್ಬರೂ ಹೆಣ್ಣು ಮಕ್ಕಳು. ಸದರಿ ದಾವೆಯಲ್ಲಿ ಸುಗಂಧಾ ರವರ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ.

4. ನನ್ನ ತಾಯಿಯ ಹೆಸರು ಅವಲಾಬಾಯಿ. ಅವರು ಮೃತಪಟ್ಟು ಸುಮಾರು 16

ವರ್ಷಗಳಾಗಿರುತ್ತವೆ. ನನ್ನ ಚಿಕ್ಕಪ್ಪ ಲೋಕಲು ರವರಿಗೆ ಇಬ್ಬರೂ ಪತ್ನಿಯರು. ನನ್ನ ಚಿಕ್ಕಪ್ಪನಿಗೆ 6 ಜನ ಗಂಡು ಮಕ್ಕಳು ಅವರುಗಳೆಂದರೆ ಮಲ್ಲಪ್ಪ, ಮಂಗೇಶ, ಬಾಳು, ಮನೋಹರ, ಯಲ್ಲಪ್ಪ ಹಾಗೂ ಆನಂದ ಎಂದರೆ ಸರಿ. ಸದರಿಯವರ ಪೈಕಿ ಈ ದಾವೆಯಲ್ಲಿ  ಮಂಗೇಶ ಬಾಳು ಹಾಗೂ  ಯಲ್ಲಪ್ಪ  ರವರನ್ನು ಮಾತ್ರ ಪಕ್ಷಗಾರರನ್ನಾಗಿ ಮಾಡಲಾಗಿದೆ ಎಂದರೆ ಸರಿ. ಮಲ್ಲಪ್ಪ, ಯಲ್ಲಪ್ಪ ಹಾಗೂ ಆನಂದ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರ ಮನೆಯಲ್ಲಿ ಮೂರು ಜನ ಮಾತ್ರ ಇದ್ದುದರಿಂದ ಅವರನ್ನು ಮಾತ್ರ ಪಕ್ಷಗರಾರನ್ನಾಗಿ ಮಾಡಲಾಗಿದೆ ಎಂದು ನುಡಿಯುತ್ತಾರೆ. ಸದರಿ 6 ಜನರನ್ನು ಪಕ್ಷಗಾರರನ್ನಾಗಿ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ.

5. ನನ್ನ ಚಿಕ್ಕತಮ್ಮ ಚಾಂಗು ಕಾಣೆಯಾಗಿರುತ್ತಾರೆ.  ನನ್ನ ತಮ್ಮ ಕಾಣೆಯಾದ ಬಗ್ಗೆ ವಾದ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ.  ಚಾಂಗು ನಾಪತ್ತೆಯಾದ ಬಗ್ಗೆ ನಾನು ದೂರು ನೀಡಿದ್ದು, ಪತ್ರಿಕಾ ಪ್ರಕಟಣೆಯನ್ನು ಸಹ ನೀಡಿರುತ್ತೇನೆ.  ನಾನು ದೂರು ಹಾಗೂ ಪತ್ರಿಕಾ ಪ್ರಕಟಣೆಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿರುವ ನಿಶಾನೆ ಪಿ 2 ರಿಂದ 4 ನನ್ನ ತಂದೆಯವರು ಮೃತಪಡುವ ಮುನ್ನ ಅಂದರೆ 2009-10 ನೇ ಸಾಲಿನ ಹಿಂದಿನ ಕಂದಾಯ  ರಶೀದಿಗಳು ಎಂದರೆ ಸರಿ. ದಾವಾ ಸ್ವತ್ತಿನ ಸಂಬಂಧ ಉತಾರವು ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಇರುವುದಿಲ್ಲ. ದಾವಾ ಸ್ವತ್ತಿನ ಸಂಬಂಧವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನನ್ನ ತಂದೆಯವರ ಮರಣಾನಂತರ ವಾರಸಾ ಪ್ರಕಾರ ನನ್ನ, ಎರಡನೇ ವಾದಿ ಮತ್ತು ಕಾಣೆಯಾದ ಚಾಂಗು ರವರ ಹೆಸರು ಉತಾರದಲ್ಲಿ ನಮೂದು ಮಾಡಿಸಿರುತ್ತೇನೆ. ನನ್ನ ತಾಯಿ ಹಾಗೂ ನನ್ನ ಸಹೋದರಿಯರ ಹೆಸರನ್ನು ಉತಾರದಲ್ಲಿ ನಮೂದು ಮಾಡಿಸಿರುವುದಿಲ್ಲ. ನನ್ನ

ತಂದೆಯವರ ಮರಣ ಪ್ರಮಾಣ ಪತ್ರವನ್ನು ನಾನು ಹಾಜರುಪಡಿಸಿರುವುದಿಲ್ಲ. ಸದರಿ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**